

# ಕಾಜಾ ಮಾಡಿ ಬಟನ್ ಇಟ್ಟು ಹೊಲಿಯುವುದು ಹೇಗೆ

ಈ ವಿಡಿಯೋದಲ್ಲಿ ನೀವು ಹೊಲಿಗೆ ಯಂತ್ರದ ಜೊತೆಯಲ್ಲಿ ಬರುವ ಸ್ಲೈಡಿಂಗ್ ಬಟನ್ ಹೋಲ್ ಫುಟ್ ಬಳಸುವುದರ ಮೂಲಕ ಬಟನ್ ಹೊಲಿಯುವುದು, ಕಾಜಾ ಮಾಡುವುದು ಹೇಗೆ ಎಂಬುದನ್ನು ತಿಳಿದುಕೊಳ್ಳುತ್ತೀರಿ.









ಇದಕ್ಕೆ ನಿಮಗೆ ಬೇಕು– 10 ಇಂಚು ಉದ್ದ ಮತ್ತು 10 ಇಂಚು ಅಗಲದ ಒಂದು ಬಟ್ಟೆ, ನಾಲ್ಕು ರಂಧ್ರಗ'ಳಿರುವ ಸಮತಟ್ಟಾದ ಬಟನ್‌ಗಳು, ನೀರಿನಲ್ಲಿ ಅಳಿಸಿಹೋಗುವ ಮಾರ್ಕರ್, ಸೀಮ್ ರಿಪ್ಪರ್, ಮತ್ತು ಬೀಡಿಂಗ್ ಪಿನ್ಸ್.

ಮೊದಲಿಗೆ ಬಟ್ಟೆಯನ್ನು ತೆಗೆದುಕೊಂಡು ಅದರ ಮಧ್ಯದಲ್ಲಿ ಅಳತೆಕೋಲನ್ನು ಇಟ್ಟು, ಬಟ್ಟೆಯ ಎರಡೂ ಬದಿಯ ಒಳಭಾಗದಲ್ಲಿ, ಅಂಚಿನಿಂದ ಒಂದು ಇಂಚು ಬಿಟ್ಟು, ಒಂದು ಗುರುತು ಹಾಕಿ.

ಗುರುತಿನ ಎಡ ಭಾಗದಲ್ಲಿ ಬಟನ್ ಇಡಿ. ಬಟನ್‌ನ ಎರಡೂ ಬದಿಗಳಲ್ಲಿ ಲಂಬಕ್ಕೆ 1/8 ಇಂಚು ದೂರದಲ್ಲಿ ಎರಡು ಗುರುತುಗಳನ್ನು ಹಾಕಿ. ನಂತರ ಕಾಜಾಗಳ ಉದ್ದವನ್ನು ಗುರುತಿಸಲು ಒಂದು ನೇರ ಗೆರೆ ಎಳೆದು, ಮೂರೂ ಗುರುತುಗಳನ್ನು ಸೇರಿಸಿ.

ಈಗ ನಾವು ಕಾಜಾ ಮಾಡಲು ಪ್ರಾರಂಭಿಸೋಣ

ಬಟನ್ ಹೋಲ್ ಫುಟ್‌ನ್ನು ನಿಮ್ಮ ಯಂತ್ರಕ್ಕೆ ಜೋಡಿಸಲು ಪ್ರೆಷರ್ ಫುಟ್‌ನ್ನು ಮೇಲಕ್ಕೆತ್ತಿ ಲಿವರ್‌ನ್ನು ಮೇಲೇರಿಸುವುದರ ಮೂಲಕ ಅಟ್ಯಾಚ್ಡ್ 'ಎ' ಫುಟ್‌ನ್ನು ರಿಲೀಸ್ ಮಾಡಿ. ಲಿವರ್‌ನ್ನು ಕೆಳಕ್ಕೆ ಮಾಡಿ ಬಟನ್ ಹೋಲ್ ಫುಟ್ ಮತ್ತು ಕ್ಲಾಂಪನ್ನು ಸರಿಹೊಂದಿಸಿ.

ಕಾಜಾದ ಪ್ರಾರಂಭದಲ್ಲಿನ ಗುರುತಿನ ಜಾಗವು ಫುಟ್‌ನ ತಳದಲ್ಲಿ ಸರಿಯಾಗಿ ಬರುವಂತೆ ಬಟ್ಟೆಯನ್ನು ಇಡಿ. ಸ್ಲೈಡರ್‌ನ್ನು ನಿಮ್ಮ ಕಡೆಗೆ ತಿರುಗಿಸಿಕೊಂಡು ಫುಟ್‌ನ್ನು ಕೆಳಕ್ಕಿಳಿಸಿ. ಸ್ಲೈಡರ್‌ನ ಮೇಲುತುದಿಯಲ್ಲಿರುವ ಬಾಣದ ಗುರುತು ಬಟ್ಟೆಯ ಮೇಲಿನ ಪ್ರಾರಂಭದ ಗುರುತಿಗೆ ಸಮನಾಗಿರಬೇಕು.











ಪ್ಯಾಟರ್ನ್ ಸೆಲೆಕ್ಟರ್ ಡಯಲ್‌ನ್ನು 1ಕ್ಕೆ ಇರಿಸಿ. ಸ್ಟಿಚ್ ಲೆಂಗ್ತ್ ಡಯಲ್‌ನ್ನು '0' ಮತ್ತು '1'ರ ಮಧ್ಯಕ್ಕೆ ಇರಿಸಿ. ಎರಡನೇ ಕಾಜಾ ಬರುವವರೆಗೂ ಹೊಲಿಯುತ್ತಾ ಹೋಗಿ.

ಈಗ ಸೂಜಿಯನ್ನು ಮೇಲಕ್ಕೆತ್ತಿ ಪ್ಯಾಟರ್ನ್ ಸೆಲೆಕ್ಟರ್‌ನ್ನು ಡಯಲ್ 2ಕ್ಕೆ ಇಟ್ಟುಕೊಳ್ಳಿ. ಕೆಲವು ಹೊಲಿಗೆಗಳನ್ನು ಹಾಕಿ ನಂತರ ಹೊಲಿಯುವುದನ್ನು ನಿಲ್ಲಿಸಿ.

ಈಗ ಸೂಜಿಯನ್ನು ಮೇಲಕ್ಕೆತ್ತಿ ಪ್ಯಾಟರ್ನ್ ಸೆಲೆಕ್ಟರ್ ಡಯಲ್‌ನ್ನು 3ಕ್ಕೆ ಇಟ್ಟುಕೊಳ್ಳಿ. ಈ ಹಿಂದಿನ ಕಾಜಾ ಗುರುತಿನವರೆಗೆ ಸೂಜಿ ಬರುವವರೆಗೂ ಹಿಮ್ಮುಖವಾಗಿ ಹೊಲಿಯಲು ಪ್ರಾರಂಭಿಸಿ.

ಸೂಜಿಯನ್ನು ಮೇಲಕ್ಕೆತ್ತಿ ಪ್ಯಾಟರ್ನ್ ಸೆಲೆಕ್ಟರ್ ಡಯಲ್ 4ಕ್ಕೆ ಇಟ್ಟುಕೊಳ್ಳಿ. ಕೆಲವು ಹೊಲಿಗೆಗಳನ್ನು ಹಾಕಿ ಹೊಲಿಯುವುದನ್ನು ನಿಲ್ಲಿಸಿ.

ಬಟ್ಟೆಯನ್ನು ಹೊರತೆಗೆಯಲು ಫುಟ್ ಮೇಲಕ್ಕೆತ್ತಿ. ಕತ್ತರಿಯಿಂದ ಹೆಚ್ಚುವರಿ ದಾರವನ್ನು ಕತ್ತರಿಸಿ. ಬಟ್ಟೆಯ ಎರಡೂ ಬದಿಯಲ್ಲಿರುವ ಹೆಚ್ಚುವರಿ ದಾರವನ್ನು ಟ್ರಿಮ್ ಮಾಡಿ.

ಈಗ ಬಟ್ಟೆಯ ಇನ್ನೊಂದು ಭಾಗದಲ್ಲಿ ಬಟನ್ ಹಾಕುವುದು

ಬಟ್ಟೆಗೆ ಬಟನ್ ಹಚ್ಚಲು ಫೀಡ್ ಡಾಗ್ ಸ್ಥಾನವನ್ನು ಕೆಳಕ್ಕೆ ತನ್ನಿ. ಎಕ್ಸ್‌ಟೆನ್ಷನ್ ಟೇಬಲನ್ನು ತೆರೆಯಿರಿ. ಬಾಬಿನ್ ಹಾಕಲು ಮುಚ್ಚಳವನ್ನು ತೆರೆಯಿರಿ. ಫೀಡ್ ಡಾಗ್ ಇಳಿಸಲು ಲಿವರನ್ನು ಬಲ ಬದಿಗೆ ತಳ್ಳಿ.

ಈಗ ಮುಚ್ಚಳವನ್ನು ಮುಚ್ಚಿ, ಎಕ್ಸ್‌ಟೆನ್ಷನ್ ಟೇಬಲನ್ನು ಜೋಡಿಸಿ ಸಿದ್ಧರಾಗಿ. ಕಾಜಾಗಳ ಮುಂದಿನ ಸಾಲಿಗೆ ಫುಟ್ ಸ್ಲೈಡರ್‌ನ ಮುಂದಿನ ಅಂಚನ್ನು ಸರಿಹೊಂದಿಸಿ. ಫುಟ್ ಕೆಳಗೆ ಗ.ುರುತು ಮಾಡಿರುವ ಜಾಗಕ್ಕೆ ಸರಿಯಾಗಿ ಬಟನ್‌ನ್ನು ಇಡಿ. ಫುಟ್‌ನ್ನು ಕೆಳಕ್ಕೆ ಮಾಡಿ.

ಸೂಜಿಯನ್ನು ಮೇಲಕ್ಕೆತ್ತಿ, ಜಿಗ್‌ಜಾಗ್ ಹೊಲಿಗೆ ಹಾಕಲು ಅನುಕೂಲವಾಗುವಂತೆ ಪ್ಯಾಟರ್ನ್ ಸೆಲೆಕ್ಟರ್ ಡಯಲ್‌ನ್ನು 'ಸಿ'ಗೆ ಇಟ್ಟುಕೊಳ್ಳಿ. ಬ್ಯಾಲೆನ್ಸ್ ವ್ಹೀಲನ್ನು ನಿಮ್ಮ ಕಡೆಗೆ ತಿರುಗಿಸಿಕೊಂಡು ಸೂಜಿಯು ಬಟನ್‌ನ ಪ್ರತಿಯೊಂದು ಕಾಜಾದಲ್ಲಿಯೂ ಇಳಿಯುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಕಾಜಾದ ಮೊದಲ ಸಾಲಿನ ಕೆಲವು ಹೊಲಿಗೆಗಳನ್ನು ಹಾಕಿ.



ಸೂಜಿಯನ್ನು ಮೇಲಕ್ಕೆತ್ತಿ, ಫುಟ್ ಎಡ್ಜ್‌ನ ಎದುರು ಭಾಗವನ್ನು ಎರಡನೇ ಸಾಲಿನ ಕಾಜಾಗಳಿಗೆ ಸರಿಯಾಗಿ ಹೊಂದಿಸಿ. ಕಾಜಾದ ಎರಡನೇ ಸಾಲಿನ ಕೆಲವು ಹೊಲಿಗೆಗಳನ್ನು ಹಾಕಿ. ಸೂಜಿಯನ್ನು ಮೇಲಕ್ಕೆತ್ತಿ, ಕೆಲವು ಹೊಲಿಗೆಗಳೊಂದಿಗೆ ಸ್ಟಿಚ್ ಲಾಕ್ ಮಾಡಲು ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಡಯಲ್‌ನ್ನು 'ಬಿ'ಗೆ ಇಟ್ಟುಕೊಳ್ಳಿ.

ಬಟನ್ ಹಚ್ಚಿರುವ ಬಟ್ಟೆಯನ್ನು ತೆಗೆದು ಎರಡೂ ಬದಿಗಳಲ್ಲಿರುವ ಹೆಚ್ಚುವರಿ ಬಟನ್‌ಗಳನ್ನು ಕತ್ತರಿಸಿ ಟ್ರಿಮ್ ಮಾಡಿ. ನೀವೀಗ ಹೆಚ್ಚೂಕಮ್ಮಿ ಎಲ್ಲ ಕೆಲಸವನ್ನೂ ಪೂರೈಸಿದ್ದೀರಿ.

ಈಗ ಒಂದು ಪಿನ್ ತೆಗೆದುಕೊಳ್ಳಿ. ಮೇಲ್ಭಾಗದಲ್ಲಿ ಪಿನ್ ಚುಚ್ಚಿ. ಸೀಮ್ ರಿಪ್ಪರ್ ತೆಗೆದುಕೊಂಡು ಬಹಳ ಸೂಕ್ಷ್ಮವಾಗಿ ಕಾಜಾವನ್ನು ಓಪನ್ ಮಾಡಿ. ಕಾಜಾದ ಮೇಲ್ಭಾಗದಲ್ಲಿ ಚುಚ್ಚಿರುವ ಪಿನ್ ಅಗತ್ಯಕ್ಕಿಂತ ಹೆಚ್ಚು ಕತ್ತರಿಸುವುದನ್ನು ತಡೆಯುತ್ತದೆ. ಈಗ ಬಟ್ಟೆಯಿಂದ ಪಿನ್‌ನ್ನು ತೆಗೆಯಿರಿ.



ಈಗ ನಿಮ್ಮ ಬಟನ್ ಹೋಲ್ ರೆಡಿಯಾಗಿದೆ. ಈಗ ನೀವು ಮಾಡಬೇಕಾಗಿರುವುದೆಂದರೆ ಬಟ್ಟೆಯನ್ನು ಮಡಚಿ, ಕಾಜಾದಲ್ಲಿ ಬಟನ್ ತೂರಿಸುವುದು ಅಷ್ಟೆ.

ನೀವು ಈ ಕೆಲಸದಲ್ಲಿ ಪರಿಣಿತರಾಗುವವರೆಗೂ ಪ್ರಾಕ್ಟೀಸ್ ಮಾಡಿ. ಆದರೆ ಸ್ಥಿರವಾದ ಕೈ ಮತ್ತು ಸ್ವಲ್ಪ ಅಭ್ಯಾಸ ಬೇಕು ಅಷ್ಟೆ.